ಒಳಗೋಡುವವಳನ್ನು ಇವನಾಗಿ ಕೆಣಕಿ ಮಾತಾಡಿಸುತ್ತಾನೆ, "ಆಯ್ತೇನ್ರೀ ಊಟ?"

ಇದಕ್ಕೆ ವನಿತಾ ಉತ್ತರಿಸುವುದಿಲ್ಲ. ತಿರುಗಿ ಕೂಡಾ ನೋಡುವುದಿಲ್ಲ. ಸೀದಾ ಒಳಗೆ ಬಂದು ಬಾಗಿಲು ಮುಚ್ಚಿ ಹದ ಮೀರಿ ಬಡಿದುಕೊಳ್ಳುತ್ತಿರುವ ಎದೆಯ ಮೇಲೆ ಬಲಗೈ ಇಟ್ಟುಕೊಂಡು ಕ್ಷಣ ಹೊತ್ತು ಸುಧಾರಿಸಿಕೊಳ್ಳುತ್ತಾಳೆ. ಇದೊಂದು ದಿನನಿತ್ಯದ ಕರ್ಮ. ಅವನು ಅಂಗಡಿ ಮುಚ್ಚಿ ಊಟಕ್ಕೆ ಹೋಗುವವರೆಗೆ ಮುಂದಿನ ಬಾಗಿಲು ತೆರೆಯುವುದಿಲ್ಲ ಎಂದು ಇವಳ ಹಟ. ಇವಳು ಹೊರಗೆ ಬಂದು ನಾಯಿಗೆ ಅನ್ನ ಹಾಕದೆ ಬಾಗಿಲು ಮುಚ್ಚುವುದಿಲ್ಲ ಎಂದು ಅವನ ಹಟ. ಕೊನೆಗೂ ಗೆಲ್ಲುತ್ತಿದ್ದಿದ್ದು ಅವನೇ. ತನ್ನ ಊಟ ಮುಗಿಸಿ ಎಂಜಲೆಲೆ ತೆಗೆಯದೆ ಹಾಗೇ ಬಿಟ್ಟಿರುವುದೆಂದರೆ ವನಿತನಿಗೆ ಅದೊಂಥರಾ ರಗಳೆ. ಕಿರಿಕಿರಿ. ಎಲೆ ಕಾಣದಂತೆ ನೊಣಗಳು ಮುತ್ತಿಕೊಂಡು ಜುಂಯ್ಗುಡುವುದನ್ನು ನೋಡಿದರೆ ಮೈ ಪರಚಿಕೊಳ್ಳುವಂತಾಗುತ್ತದೆ. ಬೇರೆ ಪಾತ್ರೆಯಲ್ಲಿ ಕಲೆಸಿ ಹಾಕಬಹುದು. ಅದೇನೋ ಅಭ್ಯಾಸ. ಅಕ್ಕಂದಿರ ಮಕ್ಕಳು ಬಂದಾಗ ಅವರು ಎಲೆಯಲ್ಲಿ ಉಳಿಸಿದ್ದನ್ನೆಲ್ಲಾ ಬಳಿದು ಸೇರಿಸಿ, ಬೀದಿನಾಯಿ ಅಂದರೆ ಎಂಜಲೆಲೆಯಲ್ಲಿ ಉಳಿದಿದ್ದನ್ನು ತಿನ್ನುವುದಕ್ಕೇ ಹುಟ್ಟಿದ್ದು ಅನ್ನುವ ಉಡಾಫೆಯ ಮನೋಭಾವ. ದೊಡ್ಡಕ್ಕ ತಂದು ಮನೆಗೆ ಸೇರಿಸಿಕೊಂಡಿದ್ದು. ಸೇರಿಸಿಕೊಂಡರೂ ಸೇರಿಸಿಕೊಳ್ಳದ ಹಾಗೆ ದೂರ ಇಡುವುದನ್ನು ಅಭ್ಯಾಸ ಮಾಡಿಸಿದ್ದೂ ಅವಳೇ. ತಾಯಿಯಿಂದ ತಪ್ಪಿಸಿಕೊಂಡು ಅವಳ ಹಿಂದೆ ಹಿಂದೆ ಕಾಲಿಗೆ ತೊಡರಿಕೊಳ್ಳುತ್ತಾ ಹಿಂಬಾಲಿಸಿಕೊಂಡು ಬಂದ ಮರಿಯ ಮೇಲೆ ದೊಡ್ಡಕ್ಕನಿಗೆ ಅದೇನೋ ಪ್ರೀತಿ. 'ಇರುತ್ತೆ ಬಿಡು, ಮನೆ ಕಾಯ್ಕೊಂಡು...' ಅಂದರೂ ಆವರಣದೊಳಗೆ ಪ್ರವೇಶ ಇಲ್ಲದೆ ಹೊರಹೊರಗೆ ವಾಸ. ಚೋಟುದ್ದದ ಮರಿ ಈಗ ದೊಡ್ಡದಾಗಿದೆ. ದೊಡ್ಡಕ್ಕ ಮನೆಗೆ ಬರುತ್ತಿದ್ದಂತೆ ಅದರ ಬಡಿವಾರ ನೋಡಬೇಕು. ಬಾಲ ಉದುರಿ ಬೀಳುವಂತೆ ಅಲ್ಲಾಡಿಸುತ್ತಾ, ಅವಳ ಹಿಂದೆ ಮುಂದೆ ಸುತ್ತುತ್ತಾ, 'ನಿನ್ನ ಹೊಟ್ಟೆ ಒಡಿಯ. ನನ್ನ ಬೀಳಿಸಿ ಬಿಡ್ತೀಯೇನೋ ಘಟಿಂಗ?' ಅನ್ನುತ್ತಾ ದೊಡ್ಡಕ್ಕ ಅದರ ತಲೆ ಸವರಿದ ನಂತರವೇ ಒಳಗೆ ಬರುತ್ತಿದ್ದಿದ್ದು.

"ಅಕ್ಕಾ, ಇಸ್ಕೂಲು ಮುಗೀತಾ?" ಅಂಗಡಿಯಲ್ಲಿರುತ್ತಿದ್ದ ಅವನು ಅದೆಷ್ಟು ಸುಭಗ ಅನ್ನುವಂತೆ ಮುಖ ಮಾಡಿಕೊಂಡು ಅಕ್ಕನನ್ನು ಮಾತಾಡಿಸುತ್ತಿದ್ದ ಅಂದರೆ ಅಕ್ಕನಿಗೆ ಅವನ ಒಳ್ಳೆಯತನದ ಬಗ್ಗೆ ಕಿಂಚಿತ್ತೂ ಅನುಮಾನವಿಲ್ಲ. ಒಂದು ಕಾಲದಲ್ಲಿ ಅವಳ ಶಿಷ್ಯ ಆಗಿದ್ದವನು. ಕಿವಿ ಹಿಂಡಿಸಿಕೊಂಡು ಲೆಕ್ಕ ಗಿಕ್ಕ ಕಲಿತವನು.

"ದಡ್ಡ ಕಣೇ. ಇಲ್ದಿದ್ರೆ ಅಪ್ಪನ ಅಂಗಡಿಗೆ ಕಚ್ಚಿಕೊಳ್ತಿದ್ನಾ?" ಎಂದು ಅಕ್ಕ ಹೇಳಿದ್ದು ವನಿತನ ನೆನಪಲ್ಲಿದೆ. ದಡ್ಡನಾ ಇವನು? ಅಕ್ಕ ಎದುರಿಗಿದ್ದಾಗ ಒಂದು ಥರ. ವನಿತಾ ಒಬ್ಬಳೇ ಕಂಡರೆ ಮತ್ತೊಂದು ಥರ. ಮಗನ ಮದುವೆ ಮಾಡಿ, ಜವಾಬ್ದಾರಿ ಕಳೆದುಕೊಂಡು, ಮೊಮ್ಮಕ್ಕಳನ್ನು ಆಡಿಸಿಕೊಂಡು ಮನೆಯಲ್ಲಿ ಹಾಯಾಗಿದ್ದಾರೆ ಇವನ ಅಪ್ಪ. ಮದುವೆಪತ್ರಿಕೆ ಕೊಡಲು ಬಂದವನನ್ನು ಬಾಯಿ ಕಳೆದುಕೊಂಡು ಕೇಳಿದ್ದಳು ಅಕ್ಕ,

"ಎಷ್ಟು ವರ್ಷಾನೋ ನಿಂಗೆ?"

"ಆಯ್ತಕ್ಕಾ, ಇಪ್ಪತ್ಮೂರು..."

"ಈ ವಯಸ್ಸಲ್ಲಿ ಹುಡುಗೀರಿಗೇ ಮದುವೆ ಆಗಿರಲ್ಲ. ನಿಂಗ್ಯಾತಕ್ಕೆ ಅವಸರ ಮಾರಾಯಾ?"

"ನಂಗಲ್ಲ, ಅಪ್ಪನಿಗೆ..."

ನಕ್ಕಿದ್ದರು ಎಲ್ಲರೂ.

"ಇಷ್ಟು ಬೇಗ ಮದುವೆ ಬೇಡ ಅನ್ಬೇಕಿತ್ತು..."

"ಹೇಳಿದ್ರೆ ಕೇಳ್ಬೇಕಲ್ಲ? ಕುತ್ತಿಗೆ ಮೇಲೆ ಕೂತ್ಗಂಬಿಟ್ಟ."

"ಆಯ್ತು ಬಿಡು, ದೇವ್ರು ಒಳ್ಳೇದು ಮಾಡ್ಲಿ..."